ಹೋದ ವಾರ ಕೇಂದ್ರದ ಕೃಷಿ ಕರಡು ಪ್ರತಿ ಬಿಡುಗಡೆಯಾಗಿದೆ ದೆಹಲಿಯಲ್ಲಿ, ಕರಡು ಪ್ರತಿ ನಿಮ್ಮ ಸರ್ಕಾರಕ್ಕೆ ಬಂದಿಲ್ಲ. ಕೃಷಿ ಇನ್ನೂ ಸಂವಿಧಾನದ ರಾಜ್ಯದ ಪಟ್ಟಿಯಲ್ಲಿದೆ. ನೀವು ಏನು ಮಾಡುತ್ತಿದ್ದೀರಿ ? ಎನ್ನುವುದನ್ನು ಸೇರಿಸಿ ಉತ್ತರ ಕೊಡಿ. ನಿಮ್ಮ ಹಕ್ಕನ್ನು ನೀವು ಚಲಾಯಿಸುತ್ತಿಲ್ಲ ಸಂವಿಧಾನದಲ್ಲಿರುವುದನ್ನು ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ನಂಜುಂಡಸ್ವಾಮಿಯವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು:– ಈಗ ಈ ವಿಷಯವನ್ನು ಇಲ್ಲಿಗೆ ಮುಗಿಸುತ್ತೇನೆ.

ವಿಶೇಷ ಅಕ್ಕಿ ಉತ್ಪಾದನಾ ಯೋಜನೆ

60. ಶ್ರೀ ಜಿ.ಎಸ್. ಆಚಾರ್ (ಬೈಂದೂರು) - ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರದ ವಿಶೇಷ ಅಕ್ಕಿ ಉತ್ಪಾದನಾ ಯೋಜನೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ರೈತರಿಗೆ 1991–92 ರಲ್ಲಿ ವಿವಿಧ ಉದ್ದೇಶಗಳಿಗಾಗಿ ಎಷ್ಟು ನೆರವು ನೀಡಲಾಗಿದೆ ?

ಆ) 1992–93ರಲ್ಲಿ ಈ ಕುರಿತಾದ ಯೋಜನೆ ಮತ್ತು ಈ ತನಕದ ಸೂಚನೆಗಳೇನು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1991–92ನೇ ಸಾಲಿನಲ್ಲಿ ವಿಶೇಷ ಅಕ್ಕಿ ಉತ್ಪಾದನಾ ಯೋಜನೆಯಡಿಯಲ್ಲಿ ಕೃಷಿ ಸಾಮಗ್ರಿಗಳನ್ನು 35769 ರೈತರಿಗೆ, 51,26,906 ರೂ.ಗಳ ಮೌಲ್ಯದಲ್ಲಿ ಹಂಚಲಾಗಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1992–93ನೇ ಸಾಲಿನಲ್ಲಿ 56,39,800ರೂ.ಗಳ ಕೃಷಿ ಸಾಮಗ್ರಿಗಳ ಪೂರೈಕೆಯ ಗುರಿಯಿದ್ದು ನವೆಂಬರ್ ಮಾಹೆಯ ಅಂತ್ಯದವರೆಗೆ 22,31,151–00ರೂ.ಗಳನ್ನು ವ್ಯಯ ಮಾಡಿ 16651 ರೈತರಿಗೆ ಕೃಷಿ ಸಾಮಗ್ರಿಗಳನ್ನು ವಿತರಿಸಲಾಗಿರುತ್ತದೆ.

ಶ್ರೀ ಜಿ.ಎಸ್. ಆಚಾರ್:– ಮಾನ್ಯ ಉಪಾಧ್ಯಕ್ಷಿಣಿಯವರೇ ಕೇಂದ್ರ ಸರ್ಕಾರದ ವಿಶೇಷ ಅಕ್ಕಿ ಉತ್ಪಾದನಾ ಯೋಜನೆ ಮೇರೆಗೆ ನಮ್ಮ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಇದರ ಸವಲತ್ತು ಸಿಗುತ್ತಿದೆ. ಕೋಟ್ಯಾಂತರ ರೂಪಾಯಿ ಈ ಯೋಜನೆಗೆ ಬರುತ್ತಿದೆ. ಆದರೆ ಇದರ ಹಣ ಸಂಪೂರ್ಣವಾಗಿ ಪ್ರತಿವರ್ಷ ವ್ಯಯವಾಗುತ್ತಿಲ್ಲ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ವರ್ಷ ಕೆಲವೊಂದು ಸವಲತ್ತುಗಳು ಕೊನೆಯಲ್ಲಿ ಲ್ಯಾಪ್ಸ್ ಆಗಿ ಹೋಗಿದೆ. ನನ್ನ ತಾಲ್ಲೂಕಿನಲ್ಲಿ ಪವರ್ ಟಿಲ್ಲರ್‌ಗಳನ್ನು ಕೊಡಲಿಕ್ಕೆ ಆಗಿಲ್ಲ. ಈಗ 92–93ನೇ ವರ್ಷದಲ್ಲಿ 56 ಲಕ್ಷ ರೂಪಾಯಿ ವ್ಯಯ ಮಾಡುವ ಗುರಿ ಇತ್ತು. ಆದರೆ, ಕೇವಲ ಎಂಟು ತಿಂಗಳಲ್ಲಿ 22 ಲಕ್ಷ. ಅಂದರೆ ಶೇಕಡ 39ರ ಸಾಧನೆ. ಇಷ್ಟು ತಡವಾಗುವುದಕ್ಕೆ ಕಾರಣವೇನು ? ಪಂಪ್‌ಸೆಟ್, ಪವರ್‌ಟಿಲ್ಲರ್, ಸ್ಪ್ರೇಯರ್ ಇತ್ಯಾದಿ ಕೊಡುವಂಥ ಈ ಕಾರ್ಯಕ್ರಮದ ಜೊತೆಗೆ ಇದನ್ನು ಸರಿಯಾಗಿ ಪ್ರಚಾರ ಮಾಡಿ. ಎಲ್ಲಾ ಮಂಡಲಗಳಲ್ಲಿಯೂ ಈಗ ಏನಾಗುತ್ತಿದೆ ಎಂದರೆ ಎಷ್ಟು ಫಲಾನುಭವಿಗಳು ಬೇಕೋ ಅಷ್ಟೇ ಅರ್ಜಿ ತೆಗೆದುಕೊಳ್ಳುವಂಥದ್ದು, ಅದಕ್ಕಿಂತ ಹೆಚ್ಚು ತೆಗೆದುಕೊಳ್ಳುತ್ತಿಲ್ಲ. ಇದು ಸಂಶಯಕ್ಕೆ ಕಾರಣವಾಗುತ್ತಿದೆ. ಸರಿಯಾದ ಪ್ರಚಾರ ಕೊಟ್ಟು ಸವಲತ್ತುಗಳನ್ನು ಕೊಡುತ್ತೀರಾ ? ಇದು ಒಂದು, ಎರಡನೆಯದು ವೈಯಕ್ತಿಕ ಸವಲತ್ತುಗಳ ಜೊತೆಗೆ ಸಾಮೂಹಿಕ ಸವಲತ್ತುಗಳನ್ನು ಕೊಡುವುದಕ್ಕೆ ಅಣೆಕಟ್ಟುಗಳು, ಕೆರೆ ದುರಸ್ತಿ, ನೀರಾವರಿ ಕಾಮಗಾರಿ, ಏತ ನೀರಾವರಿ ಇತ್ಯಾದಿ ಅಥವಾ ಈಗಾಗಲೇ ಹೇಳಿದ ಹಾಗೆ ರಸಗೊಬ್ಬರಕ್ಕೆ ಸಬ್ಸಿಡಿ

ಕೊಡುವಂಥ ಯೋಜನೆ ಇದನ್ನೆಲ್ಲಾ ಅಳವಡಿಸಿಕೊಳ್ಳುವುದಕ್ಕೆ ಈ ಯೋಜನೆಯಲ್ಲಿ ಅನುಕೂಲ ಮಾಡುವುದಕ್ಕೆ ತಾವು ಕೇಂದ್ರದೊಡನೆ ವ್ಯವಹರಿಸುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಉಪಾಧ್ಯಕ್ಷರೇ, ರೈತರಿಗೆ ಕೊಡತಕ್ಕಂಥ ಸವಲತ್ತುಗಳಲ್ಲಿ ಅನೇಕ ಇಲಾಖೆಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳು ಇವೆ. ಈಗ ಉದಾಹರಣೆಗೆ ನೀರಾವರಿ ಸೌಲಭ್ಯ ಒದಗಿಸುವುದು ಕೂಡ ರೈತರಿಗೆ ಕೊಡತಕ್ಕಂಥ ಒಂದು ವಿಶೇಷವಾದಂಥ ಸಹಾಯ. ಅವರು ಹೇಳಿದ ಹಾಗೆ ಗೊಬ್ಬರ ಅಥವಾ ಇತರೆ ಉಪಕರಣಗಳನ್ನು ಕೊಡುವಾಗ ಸಾಧ್ಯವಾದಷ್ಟು ರೈತರಿಗೆ ಅವನು ಕೊಂಡುಕೊಂಡು ಉಪಯೋಗಿಸುವುದಕ್ಕೆ ಸಾಧ್ಯವಿರುವ ಮಟ್ಟಿಗೆ ಅವುಗಳ ಬೆಲೆಗಳನ್ನು ಇಳಿಸುವುದಕ್ಕೂ ಕೂಡ ಅವಶ್ಯಕ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಈಗ ಕೊಡುತ್ತಿರತಕ್ಕಂಥ ಸಹಾಯ ಇದು ಒಂದು ಜಿಲ್ಲೆಗೆ ಮಾತ್ರ ಸಂಬಂಧಪಟ್ಟಂಥ ವಿಷಯ. ಇದರಲ್ಲಿ ಏನಾಗಿದೆ ಎಂದರೆ 92–93ರಲ್ಲಿ 56 ಲಕ್ಷ ರೂಪಾಯಿಗಳ ಕೃಷಿ ಸಾಮಗ್ರಿಗಳನ್ನು ಪೂರೈಸಿದೆ. ಮತ್ತೆ ಈ ನವೆಂಬರ್ ಮಾಹೆಯ ಅಂತ್ಯದೊಳಗೆ 22 ಲಕ್ಷ ರೂಪಾಯಿಗಳ ವ್ಯಯ ಮಾಡಿ ರೈತರಿಗೆ ಕೃಷಿ ಸಾಮಗ್ರಿಗಳನ್ನು ಒದಗಿಸಿದೆ. ಇದಲ್ಲದೆ, ಇನ್ನಾವ ರೀತಿಯಲ್ಲಿ ಸಹಾಯ ಮಾಡಬೇಕು ಎಂದು ತಿಳಿದು ಆ ಸಹಾಯಗಳನ್ನೆಲ್ಲಾ ಒದಗಿಸಿ ಅಲ್ಲಿನ ರೈತರಿಗೆ ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಏನೇನು ಪ್ರೋತ್ಸಾಹ ಕೊಡುವುದಕ್ಕೆ ಸಾಧ್ಯವೋ ಅದೆಲ್ಲಾ ಕೊಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ಎಸ್. ಆಚಾರ್:– ನಾನು ಕೇಳಿದ ಒಂದು ಪ್ರಶ್ನೆಗೆ ಉತ್ತರ ಬರಲಿಲ್ಲ. ವೈಯಕ್ತಿಕ ಸವಲತ್ತು ಕೊಡುವಂಥದ್ದು ಈಗ ಇದೆ. ಅಂದರೆ ಪ್ರತಿ ವರ್ಷ ವೈಯಕ್ತಿಕ ಸವಲತ್ತುಗಳನ್ನೇ ಕೊಡುವುದರ ಬದಲಿಗೆ ಕಮ್ಯುನಿಟಿ ಸವಲತ್ತುಗಳು ನೀರಾವರಿ ಇತ್ಯಾದಿಗಳನ್ನು ಮಾಡುವುದಕ್ಕೆ ತಾವು ಕೇಂದ್ರ ಸರ್ಕಾರದೊಡನೆ ವ್ಯವಹರಿಸುತ್ತೀರಾ ? ಅಲ್ಲಿಂದ ಬರುವ ಸಹಾಯ ಧನ ಇದು. ಇದನ್ನು ಏತಕ್ಕೆ ಮಾಡಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೇ, ಅದನ್ನು ಖಂಡಿತವಾಗಿ ಮಾಡುತ್ತೇವೆ. ಈಗ ರಾಜ್ಯ ಸರ್ಕಾರದ ನೀರಾವರಿ ಇಲಾಖೆಯ ಮುಖಾಂತರವೇ ಆಗತಕ್ಕ ಕೆಲಸಗಳು ಉಳಿದಿವೆ, ಅವುಗಳನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಮುಂದಿನ ವರ್ಷದ ಕಾರ್ಯಕ್ರಮದಲ್ಲಿ ಅವುಗಳನ್ನೆಲ್ಲಾ ಸೇರಿಸಿಕೊಂಡು ಕಾರ್ಯಗತ ಮಾಡಲು ನಾವು ಸಂಪೂರ್ಣವಾಗಿ ಸಹಾಯ ಮಾಡಲು ಸಿದ್ಧರಾಗಿದ್ದೇವೆ, ಮತ್ತು ಇದರ ಜೊತೆಗೆ ಕೇಂದ್ರ ಸರ್ಕಾರದ ಮುಖಾಂತರ ನೀರಾವರಿ ಸೌಲಭ್ಯಗಳನ್ನು ಒದಗಿಸುವುದಕ್ಕೆ ಅಥವಾ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಹಾಗೂ ಕೇಂದ್ರ ಸರ್ಕಾರದ ಸಹಾಯವನ್ನು ಇನ್ನೂ ಯಾವ್ಯಾವ ರೀತಿಯಲ್ಲಿ ಪಡೆಯಬಹುದೋ ಅದನ್ನು ಕೂಡ ಪಡೆದು ಈ ಜಿಲ್ಲೆಗೆ ಏನೇನು ಸಹಾಯ ಕೊಡಬಹುದೊ ಅದನ್ನು ಕೂಡ ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಅದಲ್ಲದೆ ಮಾನ್ಯ ಸದಸ್ಯರು ಈ ವಿಷಯದಲ್ಲಿ ಏನೇನು ಸೌಲಭ್ಯಗಳನ್ನು ಒದಗಿಸಬಹುದೋ ಎಂಬುದನ್ನು ತಿಳಿಸಿದ್ದರೆ ಅವರಿಗೆ ನಾನು ಧನ್ಯನಾಗಿದ್ದೇನೆ.

ಉಪಾಧ್ಯಕ್ಷಿಣಿಯರು:– ಮಾನ್ಯ ಪುಟ್ಟಸ್ವಾಮಿಗೌಡರೆ ತಮ್ಮ ಪ್ರಶ್ನೆಯನ್ನು ವಿತ್‌ಡ್ರಾ ಮಾಡಿಕೊಂಡಿದ್ದೀರಿ ?

SRI G. PUTTASWAMY GOWDA:– I don't press.